**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ**

**ಸಿ.ಸಿ ನಂಬ್ರ: 491/2024**

ಸರ್ಕಾರದ ಪರವಾಗಿ
ಕುಂದಾಪುರ ಸಂಚಾರಿ ಠಾಣಾ ಪೋಲಿಸರು --- ಪಿರ್ಯಾದಿದಾರರು

ಮಹಮ್ಮದ್ ಫಹೀದ್, 41 ವರ್ಷ,
ತಂದೆ: ಹಸನ್ ಸಾಹೇಬ್,
ವಾಸ: ಎಸ್.ಎಸ್. ರೆಸಿಡೆನ್ಸಿ, ಕಣ್ಣುಕೆರೆ,
ತೆಕ್ಕಟ್ಟೆ ಅಂಚೆ ಮತ್ತು ಗ್ರಾಮ,
ಕುಂದಾಪುರ ತಾಲೂಕು. --- ಆರೋಪಿ

**:ಆಪಾದನೆ:**

**ಶ್ರೀಮತಿ ಶ್ರುತಿ ಶ್ರೀ ಎಸ್. ಬಿ.ಎ., ಎಲ್.ಎಲ್.ಬಿ., 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,. ಕುಂದಾಪುರ ಆದ ನಾನು ಆರೋಪಿತರಾದ ನಿಮಗೆ ಈ ಮೂಲಕ ಮಾಡುವ ಆಪಾದನೆ ಏನೆಂದರೆ:**

ದಿ. 08.01.2024 ರಂದು ಸಮಯ ಸುಮಾರು 4.15 ಗಂಟೆಗೆ ಆಪಾದಿತನು ಕುಂದಾಪುರ ತಾಲೂಕಿನ ಬೀಜಾಡಿ ಗ್ರಾಮದ ರಾ.ಹೆ.66 ರ ಬದಿಯಲ್ಲಿನ ನಾರಾಯಣ ಭಂಡಾರಿ ಹೆರ್ ಕಟಿಂಗ್ ಶಾಪಿ ಎದುರು ಹಾದುಹೋದ ರಾ.ಹೆ. 66 ಪಶ್ಚಿಮ ಬದಿಯ ಸರ್ವಿಸ್ ರಸ್ತೆಯಲ್ಲಿ ತಾನು ಚಲಾಯಿಸಿಕೊಂಡಿದ್ದ ಮಿನಿ ಗೂಡ್ಸ ವಾಹನ ನೊಂದಣಿ ನಂಬ್ರ ಕೆಎ 20 ಎಎ 5023 ನು ನಿರ್ಲಕೆತನದಿಂದ ತನನ ಹಿಂಬದಿಯನುನ ಸರಿಯಾಗಿ ಗಮನಿಸದೇ ಚಾಲನೆ ಮಾಡಿದ್ದು, ಆ ಮೂಲಕ ಆಪಾದಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 279 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

2. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ ಆಪಾದಿತರಾದ ನೀವು ಈ ಮೇಲೆ ತಿಳಿಸಿದ ನಿಮ್ಮ ವಾಹನವನ್ನು ಮೇಲೆ ಹೇಳಿದ ರೀತಿಯಲ್ಲಿ ಚಲಾಯಿಸಿಕೊಂಡು ಬಂದು ಒಮ್ಮೆಲೆ ವಿನಾಯಕ ಸ್ಟೀಲ್ ಮತ್ತ ಫ್ಲಾಬ್ರಿಕ್ಸ ಅಂಗಡಿಯ ಕಡೆಗೆ ಹಿಮ್ಮುಖವಾಗಿ ತನ್ನ ಎಡಕ್ಕೆ ಚಲಾಯಿಸಿ ರಾ.ಹೆ.66 ರ ಕಡೆಯಿಂದ ಬಂದು ಸರ್ವಿಸ್ ರಸ್ತೆಯನ್ನು ದಾಟುತ್ತಿದ್ದ ಕಮಲರವರಿಗೆ ವಾಹನದ ಹಿಂಬದಿಯಿಂದ ಡಿಕ್ಕಿ ಹೊಡೆದು ಅವರನುನ ರಸ್ತೆಯ ಬದಿಯ ಮಣ್ಣು ರಸ್ತೆಗೆ ಬೀಳಿಸಿ ವಾಹನದ ಹಿಂದಿನ ಎಡ ಬದಿಯ ಚಕ್ರವನ್ನು ಇವರ ಹೊಟ್ಟೆಯ ಮೇಲೆ ಹತ್ತಿಸಿ ಇವರ ಎದೆಗೆ ಹೊಟ್ಟೆಗೆ, ಗುದ್ದಿದ ಗಂಭೀರ ಸ್ವರೂಪದ ಒಳ ಗಾಯ ಹಾಗೂ ಎರಡೂ ಕಾಲಿಗೆ, ಎಡ ಕೈಗೆ ರಕ್ತ ಗಾಯವನ್ನುಂಟು ಮಾಡಿ ಸಾವು ಸಂಭವಿಸಲು ಕಾರಣರಾಗಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 304 (ಎ)ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

(ಸದರಿ ಆರೋಪಗಳ ಕುರಿತಂತೆ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ )

ದಿನಾಂಕ :12.11.2025

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಕುಂದಾಪುರ

**ಸಿ.ಸಿ. ಸಂಖ್ಯೆ :491/2024**

ಫಿರ್ಯಾದುದಾರರು : ಸರಕಾರದ ಪರವಾಗಿ ಕುಂದಾಪುರ ಸಂಚಾರಿ ಠಾಣಾ ಪೋಲಿಸರು,

- ವಿರುದ್ಧ-

ಆರೋಪಿ : ಮಹಮ್ಮದ್ ಫಹೀದ್, ತಂದೆಃ ಹಸನ್ ಸಾಹೇಬ್,

1. ಮೇಲೆ ಹೇಳಿದಂತೆ ನಿಮಗೆ ಓಡಿ ಹೇಳಿ ವಿವರಿಸಿದ ಆಪಾದನೆಯ ಸಾರಾಂಶವನ್ನು ಅರ್ಥಮಾಡಿಕೊಂಡಿರಾ?

ಉ.

2. ಅಪರಾಧವನ್ನು ಒಪ್ಪಿ ಕೊಳ್ಳುವಿರಾ ಅಥವಾ ನಿಮ್ಮ ಪರ ಪ್ರತಿರಕ್ಷೆ ಇದೆಯಾ.?

ಉ.

ಮೇಲ್ಕಂಡ ಆಪಾದನೆಯ ಸಾರಾಂಶವನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಬೆರದುಕೊಂಡಿದ್ದು ಅವು ಸರಿಯಾಗಿರುತ್ತವೆಂದು ಈ ಮೂಲಕ ದೃಢಿಕರಿಸುತ್ತೇನೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ.